ಅಸಲು ದಾವಾ ನಂ. 175/2017
ಪಿ ಡಬ್ಲು 1

ದಿನಾಂಕಃ 17-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ನಂ.1, 2, 4 ರವರ ಪರ ಶ್ರೀ. ವಿ ಕೆ ಕೆ ವಕೀಲರಿಂದ.**

ದಾವಾ ಆಸ್ತಿಯು ವಾಸುದೇವಗೌಡ ಮತ್ತು ಪ್ರತಿವಾದಿ ನಂ.5 ಇವರಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಂದರೆ ಸರಿ. 5 ನೇ ಪ್ರತಿವಾದಿಗೆ ವಿನಾಯಕಗೌಡ, ವಿದ್ಯಾ, ವಿಜಯಲಕ್ಷ್ಮೀ ಎಂಬ ಮಕ್ಕಳು ಎಂದರೆ ಸರಿ. 5 ನೇ ಪ್ರತಿವಾದಿಗೆ ಸಾವಿತ್ರಿ ಎಂಬುವ ಹೆಂಡತಿ ಇರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಜಮೀನು 1 ಎಕರೆಗೆ ಈಗ 30 ರಿಂದ 40 ಲಕ್ಷ ಮಾರುಕಟ್ಟೆ ಬೆಲೆ ಇರುತ್ತದೆ ಎಂದರೆ ಸರಿಯಲ್ಲ. ಹಾಗೇ 1 ಎಕರೆಗೆ 30 ರಿಂದ 40 ಲಕ್ಷ ಮಾರುಕಟ್ಟೆ ಬೆಲೆ ಇದ್ದರೂ ನಾನು ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2010 ರಲ್ಲಿ ದಾವಾ ಆಸ್ತಿಯ ಜಮೀನು 1 ಎಕರೆಗೆ 15 ರಿಂದ 20 ಲಕ್ಷ ಮಾರುಕಟ್ಟೆ ಬೆಲೆ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಆ ದಿನಕ್ಕೆ ನಾನು ಖರೀದಿ ಹಿಡಿದ ಮಾರುಕಟ್ಟೆ ಬೆಲೆ ಹೆಚ್ಚಿ ಗೆ ಇತ್ತು ಎಂದು ನುಡಿಯುತ್ತಾರೆ. ಹಾಗೇ ಜಮೀನು 1 ಎಕರೆಗೆ 15 ರಿಂದ 20 ಲಕ್ಷ ಮಾರುಕಟ್ಟೆ ಬೆಲೆ ಇದ್ದರೂ ನಾನು ಖರೀದಿ ಹಿಡಿದ ಮಾರುಕಟ್ಟೆ ಬೆಲೆ ಹೆಚ್ಚಿ ಗೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆ ನಾನು ಸಾಕ್ಷ್ಯ ನುಡಿಯುವಾಗ ದಾವಾ ಆಸ್ತಿಯನ್ನು ಲಾವಣಿಯ ಮೇಲೆ ಪಡೆದುಕೊಂಡಿರುವುದಾಗಿ ಹೇಳಿದ್ದು, ಅದರ ಸಂಬಂಧ ನನ್ನ ಮತ್ತು ಮಾಲೀಕರ ನಡುವೆ ದೊಡ್ಡ ಜಗಳ ಆಗಿತ್ತು ಎಂದರೆ ಸರಿಯಲ್ಲ. ಆ ಸಂಬಂಧ 2010 ರಲ್ಲಿ ನನ್ನ ನಡುವೆ ಮಾಲೀಕರು ಮತ್ತು ಪ್ರತಿವಾದಿಯರ ನಡುವೆ ಮನಸ್ತಾಪ ಉಂಟಾಗಿತ್ತು ಎಂದರೆ ಸರಿಯಲ್ಲ. ಆಗ ಊರ ಹಿರಿಯರು ಗ್ರಾಮದ ದೇವಸ್ಥಾನದಲ್ಲಿ ನನ್ನ ಮತ್ತು ಮಾಲೀಕರು ಪ್ರತಿವಾದಿಯರ ನಡುವೆ ರಾಜೀ ಸಂಧಾನ ಪಂಚಾಯತಿ ಮಾಡಿದ್ದರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಮಾಲೀಕರು, ಪ್ರತಿವಾದಿಯರು ಪ್ರತ್ಯೇಕವಾಗಿ ಪಂಚರಿಗೆ ಛಾಪಾ ಕಾಗದ ತಂದು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆ ಪಂಚರು ನಾನು ಸುಳ್ಳು ಆಧರಿಸುವ ಖರೀದಿ ಪತ್ರದ ಮೇಲೆ ಸಹಿ ಮಾಡಿದ ಸಾಕ್ಷಿದಾರರು ಎಂದರೆ ಸರಿಯಲ್ಲ.

2. ವಾಸುದೇವಗೌಡರಿಗೆ 2010 ಕ್ಕಿಂತ ಹಿಂದಿನಿಂದಲೂ ಅತೀಯಾದ ಕುಡಿತದ ಚಟ ಇತ್ತು ಎಂದರೆ ಸರಿಯಲ್ಲ. ಊರ ಹಿರಿಯರು ನನಗೆ ಹಾಗೂ ಪ್ರತಿವಾದಿಯರಿಗೆ ಖಾಲಿ ಛಾಪಾ ಕಾಗದ ನೀಡುವಂತೆ ಹೇಳಿದ್ದರ ಮೇರೆಗೆ ತಂದು ಕೊಟ್ಟಿದ್ದು, ಅದರ ಮೇಲೆ ಸಹಿ

ಮಾಡು ಎಂದು ಹೇಳಿದ್ದರ ಮೇರೆಗೆ 2 ಮತ್ತು 5 ನೇ ಪ್ರತಿವಾದಿ, ಮೃತ ವಾಸುದೇವಗೌಡ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ 5 ನೇ ಪ್ರತಿವಾದಿ ನಮ್ಮ ಸಹಿ ಮಾತ್ರ ಏಕೆ ಪಡೆದುಕೊಳ್ಳುತ್ತೀರಿ ಎಂದು ಕೇಳಿದಾಗ ಪಂಚ ಜನರು ಸಹ ಸಹಿ ಮಾಡುವುದಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಮೃತ ವಾಸುದೇವಗೌಡ, 2 ಮತ್ತು 5 ನೇ ಪ್ರತಿವಾದಿ ಹಾಗೂ ಊರ ಹಿರಿಯರು ಖಾಲಿ ಛಾಪಾ ಕಾಗದದ ಮೇಲೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕ 22-01-2010 ರಂದು ಹಾಗೇ ಸಹಿ ಪಡೆದುಕೊಂಡ ನಂತರ ನಮ್ಮ ಇಬ್ಬರು ಜನರಿಗೂ ತಂಟೆ ಮಾಡದಂತೆ ಬುದ್ಧಿ ಮಾತು ಹೇಳಿ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಉಪಟಳ ಜಾಸ್ತಿಯಾಗಿರುತ್ತದೆ ಆದ್ದರಿಂದ ಆತನ ಸಹಿ ಸಹ ಪಡೆಯುವಂತೆ ನಾನು ಹಿರಿಯರಿಗೆ ಹೇಳಿದ್ದರಿಂದ 2 ನೇ ಪ್ರತಿವಾದಿಯ ಸಹಿ ಹಿರಿಯರು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೇ 3-4 ಖಾಲಿ ಛಾಪಾ ಕಾಗದದ ಮೇಲೆ ನಾವೆಲ್ಲರೂ ಮತ್ತು ಊರ ಹಿರಿಯರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಪೈಕಿ ಒಂದು ಛಾಪಾ ಕಾಗದದ ಮೇಲೆ ಪುಟ ಸಂಖ್ಯೆ 2 (3, 4, ನಿಪಿ-2) ರಲ್ಲಿ ಸಹ ಸಹಿ ಪಡೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಹಾಗೇ ರಾಜೀ ಆದ ನಂತರ ನಾವು ನಮ್ಮ ಮನೆಗೆ ಅವರು ಅವರ ಮನೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಖಾಲಿ ಛಾಪಾ ಕಾಗದಗಳು ನಂತರದಲ್ಲಿ ಊರ ಹಿರಿಯರ ಬಳಿ ಉಳಿದುಕೊಂಡವು ಎಂದರೆ ಸರಿಯಲ್ಲ. ನಮ್ಮ ಹೆಸರಿಗೆ ಪಡೆದುಕೊಂಡ ಛಾಪಾ ಕಾಗದವನ್ನು ಊರ ಹಿರಿಯರೊಂದಿಗೆ ಮಿಲಾಪಿಯಾಗಿ ಅದನ್ನು ಖರೀದಿ ಕರಾರು ಪತ್ರ, ಭರಪಾಯಿ ಪತ್ರ ಮತ್ತು ನಿಪಿ-2 ಹಾಗೂ 3 ದಾಖಲೆಗಳನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಆಧರಿಸಿರುವ ಖೊಟ್ಟಿ ಕಾಗದ ಪತ್ರಗಳ ಆಧಾರದ ಮೇಲಿಂದ ಪ್ರತಿವಾದಿಯರು ಎಂದು ಯಾವ ಕಾಲಕ್ಕೂ ದಾವಾ ಆಸ್ತಿಯನ್ನು ನನಗೆ ಖರೀದಿ ನೀಡುವ ಯಾವುದೇ ಉದ್ದೇಶ ಪರಿಸ್ಥಿತಿ ಉಂಟಾಗಿರಲಿಲ್ಲ ಎಂದರೆ ಸರಿಯಲ್ಲ.

3. ನಾನು ಆಧರಿಸುವ ಕಾಗದ ಪತ್ರಗಳ ಮೇಲೆ ಸಹಿ ಮಾಡಿದ ವ್ಯಕ್ತಿಗಳು ನಮ್ಮ ಊರಿನವರೇ ಎಂದರೆ ಸರಿ. ನಾನು ಮತ್ತು ಊರ ಹಿರಿಯರು ಒಬ್ಬರಿಗೊಬ್ಬರು ಮಿಲಾಪಿಯಾಗಿ ಖೊಟ್ಟಿ ಕಾಗದ ಪತ್ರ ತಯಾರಿಸಿ ನಂತರ ಖರೀದಿ ಪಡೆದುಕೊಂಡು ದಾವಾ ಆಸ್ತಿಯನ್ನು ನಾವೆಲ್ಲರೂ ಹೆಚ್ಚಿನ ಮಾರುಕಟ್ಟೆ ಬೆಲೆಗೆ ಮಾರಾಟ ಮಾಡಿ ಬಂದ ಹಣವನ್ನು ಹಂಚಿಕೊಳ್ಳುವ ಉದ್ದೇಶ ಹೊಂದಿರುತ್ತೇವೆ ಎಂದರೆ ಸರಿಯಲ್ಲ. ನಾನು

ಆಧರಿಸುವ ಕಾಗದ ಪತ್ರಗಳು ಅದರ ಬರಹಗಾರ, ಸಾಕ್ಷಿದಾರರ ಸಹಿ ಇವುಗಳನ್ನು ನಾವು ದುರುಪಯೋಗಪಡಿಸಿಕೊಂಡು ತಯಾರಿಸಿದ ಕಾಗದ ಪತ್ರಗಳು ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ದಿನಾಂಕ 22-01-2000 ಇದ್ದಿದ್ದನ್ನು 2010 ಎಂದು ನಾವೆಲ್ಲರೂ ತಿದ್ದುಪಡಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಇಸ್ವಿಯ ಸಂಬಂಧ ಸ್ವಲ್ಪ ತಪ್ಪಾಗಿತ್ತು ಅದನ್ನು ಸರಿ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಇಸ್ವಿಯನ್ನು ನೋಡಿದಾಗ ಅದು ಮೇಲು ನೋಟಕ್ಕೆ ಖೊಟ್ಟಿಯಾಗಿ ಹುಟ್ಟಿಸಿಕೊಂಡ ಕಾಗದ ಪತ್ರ ಎಂದು ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ದಿನಾಂಕ 22-01-2010 ರಂದು ರೂ.3 ಲಕ್ಷ 50 ಸಾವಿರ ದಿನಾಂಕ 17-04-2010 ರಂದು ರೂ.1 ಲಕ್ಷ 25 ಸಾವಿರ ಹಾಗೂ ದಿನಾಂಕ 08-05-2011 ರಂದು ರೂ.50 ಸಾವಿರ ಹಣ ಪ್ರತಿವಾದಿಯರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ದಿನಾಂಕಗಳಂದು ನನಗೆ ಅಷ್ಟು ಹಣ ನೀಡುವ ತಾಕತ್ತು ಇರಲಿಲ್ಲ ಎಂದರೆ ಸರಿಯಲ್ಲ. ವಾಸುದೇವಗೌಡನ ಕುಡಿತದ ಅಮಲಿನ ಪಾಯ್ದೆ ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಲಗ್ನದ ಸಂಬಂಧ ಮತ್ತು ಇತರ ಅವಶ್ಯಕತೆಗಳ ಸಂಬಂಧ ನನಗೆ ದಾವಾ ಆಸ್ತಿಯನ್ನು ಖರೀದಿ ನೀಡುವ ಉದ್ದೇಶ ಹೊಂದಿದ್ದರು ಎಂದು ಹೇಳಿದ್ದು ಆಗ ಅವರಿಗೆ ಆ ರೀತಿಯ ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ 3 ಇವು ಪ್ರತಿವಾದಿಯರಿಗೆ ಯಾವುದೇ ರೀತಿಯ ಬಂಧನಕಾರಕ ಇರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ಊರ ಹಿರಿಯರನ್ನು ಕರೆದುಕೊಂಡು ಪ್ರತಿವಾದಿಯರಲ್ಲಿ ನಮ್ಮ ಸ್ವಂತ ವಾಹನದ ಮೂಲಕ ಕುಂದಗೋಳ ತಾಲೂಕಿನ ಹಿರೇಬೂದಿಹಾಳ ಗ್ರಾಮಕ್ಕೆ ಪಂಚರ ಮೂಲಕ ಹೋಗಿ ವ್ಯವಹಾರ ಮಾತುಕತೆ ಮಾಡಿ ನಂತರ ನಿಪಿ-1 ನ್ನು ಬರೆಯಿಸಿಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಂಬಂಧ ಮೃತ ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿಯ ಮಧ್ಯೆ ಯಾವುದೇ ಪಾಲು ಆಗಿಲ್ಲ ಎಂದರೆ ಸರಿ. ದಾವಾದ ಆಸ್ತಿಗೆ ಮೃತ ವಾಸುದೇವಗೌಡನ ವಾರಸುದಾರರು ಹಾಗೂ 5 ನೇ ಪ್ರತಿವಾದಿ ಹೆಂಡತಿ ಮಕ್ಕಳು ಮಾಲೀಕರು ಎಂದರೆ ಸರಿ. ಆದ್ದರಿಂದ ನಾನು ಆಧರಿಸುವ ಖೊಟ್ಟಿ ಕಾಗದ ಪತ್ರಗಳು ವಾಸುದೇವಗೌಡನ ವಾರಸುದಾರರು ಮತ್ತು 5 ನೇ ಪ್ರತಿವಾದಿಯ ಹೆಂಡತಿ ಮಕ್ಕಳ ಮೇಲೆ ಬಂಧನಕಾರಕ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಮೇಲೆ ಖೊಟ್ಟಿ ದಾವೆ ಸಲ್ಲಿಸಿದ್ದರಿಂದ ಪ್ರತಿವಾದಿಯರಿಗೆ ತುಂಬಲಾರದ ಹಾನಿ ಉಂಟಾಗಿರುತ್ತದೆ ಎಂದರೆ

ಸರಿಯಲ್ಲ. ಪಂಚರ ಚಿತಾವಣಿಯ ಮೇರೆಗೆ ನಾನು ಪ್ರತಿವಾದಿಯರೊಂದಿಗೆ ಜಿದ್ದಿಗೆ ಬಿದ್ದು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).